9. ಕಡೂರಿನಲ್ಲಿ ಕೊರಮ ಜನಾಂಗದವರಿಂ ಈಚಲು ಕಡ್ಡಿಗಳನ್ನು ಪಡೆಯಲು ಹೋದಾಗ ಆಗತಕ್ಕ ಕಿರುಕುಳ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರಿಂ ಜಿಲ್ಲೆ ಕಡೂರಿನಲ್ಲಿ ಕೊರಮರ ಜನಾಂಗದವರು ನೂರಾರು ಕುಟುಂಬಗಳು ಅನೇಕ ತಲೆಮಾರುಗಳಿಂದ ಈಚಲ್ಲು ಕಡ್ಡಿಗಳನ್ನು ತಂದು ಬುಟ್ಟಿ ಹೆಣೆದು ಜೀವನ ನಡೆಸುತ್ತಿದ್ದಾರೆ. ಆದರೆ ಇತ್ತೀಚೆಗೆ ಅಬ್ಕಾರಿ ಅಧಿಕಾರಿಗಳು ಕಿರುಕುಳ ಕೊಡುತ್ತಾ ಈಚಲು ಕಡ್ಡಿ ತರಲು ತೊಂದರೆ ಮಾಡಿರುವುದರಿಂದ ಅವರ ಜೀವನಕ್ಕೆ ತೊಂದರೆ ಆಗಿದೆ. ವಾರಕ್ಕೊಂದು ಬಾರಿ ಪ್ರತಿ ಗಿಡಕ್ಕೆ ಮೂರು ನಾಲ್ಕು ಕಡ್ಡಿಗಳನ್ನು ಅಬ್ಕಾರಿ ಗಾರ್ಡ್‌ಗಳ ಮೇಲ್ವಿಚಾರಣೆಯಲ್ಲಿ ಈಚಲು ಕಡ್ಡಿ ಕತ್ತರಿಸಿ ತರಲು ಜಿಲ್ಲಾಧಿಕಾರಿಗಳು ಅನುಮತಿ ಕೊಡುತ್ತಿದ್ದರು. ಜಿಲ್ಲಾಧಿಕಾರಿಗಳ ಆಜ್ಞೆ ಸಂಖ್ಯೆ ಇ.ಎಕ್ಸ್.ಇ. ೪ ಡಿ.ಆರ್.ಎಲ್. ೪ ೮೫–೮೬/೧೭–೯–೧೯೮೫ ರಂದು ಅನುಮತಿ ನೀಡಿದ್ದರು. ಈ ರೀತಿ ಕಿರುಕುಳದಿಂದ ಅವರು ಬೀದಿಪಾಲಾಗಿದ್ದಾರೆ. ದಯಮಾಡಿ ಈ ಬಡ ಕುಟುಂಬಕ್ಕೆ ಅಬಕಾರಿ ಇಲಾಖೆಯವರು ಅರಣ್ಯ ಇಲಾಖೆಯವರು ತೊಂದರೆ ಕೊಡದೆ ಈಚಲು ಕಡ್ಡಿಗಳನ್ನು ತರಲು ಅನುಮತಿ ಕೊಡಿಸುವ ಬಗ್ಗೆ ಸರ್ಕಾರದ ಹೇಳಿಕೆಯನ್ನು ತಿಳಿಯಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರವನ್ನು ತರಿಸಿಕೊಡುತ್ತೇನೆ. But you cannot compel us.

ಒಬ್ಬ ಮಾನ್ಯ ಸದಸ್ಯರು.—ಎಲ್ಲದಕ್ಕೂ ಉತ್ತರಿಸಲು ಇವರು ತಯಾರಾಗಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಾಗಲ್ಲ, ಜಂಟಿ ಜವಾಬ್ದಾರಿ ಇದೆ.

SRI D. B. INAMDAR.—Cutting of date tree leaves is governed by the Karnataka Excise (Cutting and removal of date leaves and dead wood) Rules, 1967.

ಶ್ರೀ ಬಿ. ಎ. ಇದಿನಬ್ಬ —ಕನ್ನಡದಲ್ಲಿ ಉತ್ತರಿಸಬೇಕು, ನಮಗೆ ಕನ್ನಡ ಬೇಕು. ಕನ್ನಡ ಎಲ್ಲಾ ಕಡೆ ಬಳಕೆಯಾಗಬೇಕೆಂದು ಹೇಳುತ್ತೀರಿ, ಆದರೂ ಈ ರೀತಿ ಮಾಡುತ್ತೀರಲ್ಲ.

ಶ್ರೀ ಡಿ. ಬಿ. ಇನಾಂದಾರ್.—ನಾಳೆ ಕನ್ನಡದಲ್ಲಿ ಹೇಳುತ್ತೇನೆ. Under these rules permission can be given to cut and remove date leaves in two ways :

(a) Free of charge to persons who are not professional rope makers, basket and mat makers when the leaves are are required for making ropes or other bonafide agricultural purposes.

(b) On payment of fees (at Rs. 6 for 6 months and at Rs. 12 for a period exceeding 6 months) to the professional rope, basket and mat makers.

Such permission is given only in such areas where date groves are in excess of demand for toddy or may not be required for supply of toddy elsewhere. Further, licences to cut date leaves will not be granted in areas where a date species called Kir–ichal (phoenix Farinifera) is available-

In respect of Kadur taluk it is true that curring of date leaves was being permitted under the order of the Deputy Commissioner Whenever the trees were not required for the purpose of tappding

toddy, cutting of date leaves was generally permitted by issue of licences. As already stated the Deputy Commissioners are authorised under these Rules to issue licence for cutting of leaves depending upon the availability of date groves in a locality.

It is learnt that in respect of Kadur Taluk the Kormara Sangha has already represented to the Deputy Commissioner, Chickmagalur, for permission to cut date leave for purposes of making baskets and this representation is under consideration by the Deputy Commissioner. In view of the decision of Government to discontinue sale of toddy in Chikamagalur district with effect from 1-7-1988 the Deputy Commissioner should be able to issue licences hereafter more liberally.

10 ಬೈಂದೂರಿಗೆ ಎಲೆಕ್ಟ್ರಿಕ್ ಸಬ್‌ಸ್ಟೇಷನನ್ನು ಸ್ಥಾಪಿಸುವ ಬಗ್ಗೆ

ಶ್ರೀ ಜಿ ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ ವಿದ್ಯುತ್ ಪೂರೈಕೆಯ ದೃಷ್ಟಿಯಿಂದ ಅತ್ಯಂತ ಅಲಕ್ಷಿತವಾದ ಕ್ಷೇತ್ರ-ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು. ಲೋ ಓಲ್ಟೇಜ್ ಕಾರಣ, ಬೈಂದೂರಿಗೆ ಪ್ರತ್ಯೇಕ ಸಬ್‌ಸ್ಟೇಷನ್‌ಗಾಗಿ ಒತ್ತಾಯಿಸಲಾಯಿತು. ಆದ ಮಂಜೂರಾದರು ಕಾರ್ಯಾರಂಭವಾಗಿಲ್ಲ. ಕುಂದಾಪುರದಲ್ಲಿ ಈಗ ಇರುವ ಅಧಿಕಾರಿಗಳಿಗೆ ಕೆಲಸದ ಒತ್ತಡದಿಂದಾಗಿ ಹೊಸ ಕನೆಕ್ಷನ್‌ಗಳಿಗೆ ವಿಪರೀತ ವಿಳಂಬ, ಬೈಂದೂರಿನಲ್ಲಿ ಕೆ.ಇ.ಬಿ.ಯ ಉಪ ವಿಭಾಗ ತೆರೆಯಬೇಕಂ. ಇಲ್ಲವಾದರೆ, ನಿರ್ವಹಣೆ-ವಿಸ್ತರಣೆಗಳಿಗೆ ಬಹಳ ತೊಂದರೆ ಆಗುತ್ತದೆ. ಟಾನ್ಸ್‌ಫಾರ್ಮರ್ ಸ್ಥಾಪಿಸಿ, ಲೈನ್ ಹಾಕಿ, ಪಂಪ್ಸೆಟ್ಟು ಇರಿಸಿದಲ್ಲಿ ಸಹ ಕನೆಕ್ಷನ್ ಕೊಟ್ಟಿಲ್ಲ. ಶಿರೂರಿನಲ್ಲಿ. ಉಪ್ಪುಂದ-ಮೆಡಿಕಲ್‌ನಲ್ಲಿ ಈ ರೀತಿ ಆಗಿದೆ. ಪಂಪು ಖರೀದಿಸಿದ ಕಿರಿಮಂಜೇಶ್ವರ ಕೊಡೇರಿಗೆ ಲೈನ್ ಹಾಕಿಲ್ಲ. ಉಡಮೊಗೆ, ಅಜ್ರಿ, ಬೆಳ್ಳಾಲ, ಜಡ್ಕಲ, ಮುದೂರುಗಳಲ್ಲಿ ಸಹ ಇಂತಹ ದೂರು ಇದೆ. ಗೃಹ ಬಳಕೆಗೆ ಸಹ ಇದೇ ರೀತಿ ಆಗಿದೆ. ಮಳೆಗಾಲ ಬರುವುದರೊಳಗೆ ಲೈನ್ ಹಾಕದಿದ್ದರೆ ಮತ್ತೊಂದು ವರ್ಷ ತಡವಾಗುತ್ತದೆ. ಈ ಎಲ್ಲಾ ವಿಚಾರಗಳಲ್ಲಿ ಸೂಕ್ತ ಕ್ರಮಕ್ಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಸಚಿವರು).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಬೈಂದೂರಿನಲ್ಲಿ ಒಂದು ೩೩/೧೧ ಕೆವಿ ಔ ಎಂವಿಎ ಸಾಮರ್ಥ್ಯದ ಸಬ್ ಸ್ಟೇಷನ್ ಹಾಕಲು ಯೋಚಿಸಿದ್ದು ಲೈನಿನ ಸರ್ವೆ ಕೆಲಸ ಮುಗಿದಿದೆ. ಸಬ್ ಸ್ಟೇಷನ್ ಸ್ಥಾಪಿಸಲು ನಿವೇಶನದ ಆಯ್ಕೆಯಾಗಿದ್ದು ಅದನ್ನು ವಶಪಡಿಸಿಕೊಳ್ಳುವ ಬಗ್ಗೆ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಪತ್ರ ಬರೆಯಲಾಗಿದೆ. ಈ ಸಾಲಿನಲ್ಲಿ ಈ ಕೆಲಸಕ್ಕೆ ೧೫ ಲಕ್ಷ ರೂಪಾಯಿಗಳನು ಆಯವ್ಯಯದಲ್ಲಿ ಒದಗಿಸಲಾಗಿದ್ದು ಕೆಲಸವನ್ನು ಈ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುತ್ತದೆ. ಈ ಸ ಸ್ಟೇಷನ್ ಕಾರ್ಯಾರಂಭ ಮಾಡಿದ ಮೇಲೆ ಸುತ್ತಮುತ್ತಲಿನ ಪ್ರದೇಶದಲ್ಲಿನ ಕಡಿಮೆ ಓಲ್ಟೇಜಿನ ಸ್ಥಿತಿ ಸುಧಾರಿಸುತ್ತದೆ.

ಬೈಂದೂರಿನಲ್ಲಿ ಉಪ ವಿಭಾಗ ತೆರೆಯುವ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ರಾಜ್ಯದಲ್ಲಿ ವಿಭಾಗ, ಉಪ ವಿಭಾಗಗಳ ಪುನರ್ ರಚನೆಯ ಬಗ್ಗೆ ಮಂಡಲಿ ಯೋಚಿಸಿದ್ದು ಅಗತ್ಯ ಕಂಡುಬಂದಲ್ಲಿ ಮಾಡಲಾಗುತ್ತದೆ. ಈ ಕೆಲಸ ಈಗ ಪ್ರಗತಿಯಲ್ಲಿದೆ. ಬೈಂದೂರಿನಲ್ಲಿ ಉಪ ವಿಭಾಗ ತೆರೆಯುವ ಪ್ರಶ್ನೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಕುಂದಾಪುರ ತಾಲ್ಲೂಕಿನಲ್ಲಿ ಕಳೆದ ಸಾಲಿನಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವುದರಲ್ಲಿ ಗಾರಿ ಮೀರಿ ಪ್ರಗತಿ ಸಾಧಿಸಲಾಗುತ್ತಿದೆ. ೧೯೮೭-೮೮ನೇ ಸಾಲಿನ ಗಾರಿ ೨೫೦ ಪಂಪುಸೆಟ್ಟುಗಳಿಗಿದ್ದು ಸಾಧನೆ ೩೧೭ ಪಂಪುಸೆಟ್ಟುಗಳು.